## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಗುಂಡ್ಲುಪೇಟೆ

**ಸಿಸಿ ನಂಃ 732/2023**

| | | |
|---|---|---|
| ಸಾಕ್ಷಿದಾರರ ಹೆಸರು | ರಾಜು | ಪ್ರಮಾಣ ವಚನ ಬೋಧಿಸಿದ ದಿನಾಂಕಃ 28.02.2025 |
| ತಂದೆಯ ಹೆಸರು/ ಗಂಡನ ಹೆಸರು | ರಾಮಸ್ವಾಮಿ | |
| ವಯಸ್ಸು | 28 ವರ್ಷ | |
| ಉದ್ಯೋಗ | ಸೋಲಾರ್ ಕೆಲಸ | ಪ್ರಾಸಾಃ 1 |
| ವಾಸ | ಮದ್ದೂರು ಗ್ರಾಮ | ಚಾಸಾಃ 1 |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿರವರಿಂದಃ**

ಚಾಸಾ–2 ನನ್ನ ತಾಯಿ. ಚಾಸಾ–3 ನನ್ನ ತಮ್ಮ. ಚಾಸಾ–4 ಮತ್ತು 5 ರವರ ಪರಿಚಯವಿರುತ್ತದೆ. ಆರೋಪಿಯ ಪರಿಚಯವಿರುತ್ತದೆ.

ಈಗ್ಗೆ ಒಂದು ವರ್ಷದ ಹಿಂದೆ ಮಧ್ಯಾಹ್ನ 3.15 ಗಂಟೆ ಸುಮಾರಿಗೆ ನಾನು ನಮ್ಮ ಮನೆಯ ಹತ್ತಿರ ಚಾವಡಿಯಲ್ಲಿ ಇದ್ದೆನು. ಆಗ ಆರೋಪಿ ಅಲ್ಲಿಗೆ ಬಂದು ಕಲ್ಲಿನಿಂದ ನನ್ನ ಎಡಗಣ್ಣಿನ ಹತ್ತಿರ ಹೊಡೆದಿರುತ್ತಾನೆ. ಆಗ ನನ್ನ ತಾಯಿ ಅಲ್ಲಿಗೆ ಬಂದಿರುತ್ತಾರೆ. ನನ್ನ ತಾಯಿ ಏಕೆ ಹೊಡೆಯುತ್ತಿದ್ದೀಯಾ ಎಂದು ಕೇಳಿದಾಗ ಅವಳನ್ನು ಎತ್ತಿ ಎಸೆದಿರುತ್ತಾನೆ. ಆಗ ನನ್ನ ತಮ್ಮ ರಾಜೇಶ ಅಲ್ಲಿಗೆ ಬಂದಿದ್ದು, ಆತ ಜಗಳ ಬಿಡಿಸಿ ನಮ್ಮನ್ನು ಕಗ್ಗಳದ ಹುಂಡಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾನೆ. ಅಲ್ಲಿಂದ ಹೆಚ್ಚಿನ ಚಿಕಿತ್ಸೆಗೆ ಚಾಮರಾಜನಗರಕ್ಕೆ ಹೋಗಿರುತ್ತೇವೆ. ಈ ಬಗ್ಗೆ ದೂರನ್ನು ನೀಡಿರುತ್ತೇನೆ. ಸದರಿ ದೂರನ್ನು ನೋಡುತ್ತಿದ್ದು, ಅದನ್ನು ನಿಪಿ–1 ಎಂದು ಮತ್ತು ಅದರಲ್ಲಿ ಇರುವ ಸಾಕ್ಷಿದಾರರ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು.

ನಾನು ದೂರನ್ನು ನೀಡಿದ ನಂತರ ಪೊಲೀಸರು ಘಟನಾ ಸ್ಥಳಕ್ಕೆ ಬಂದು ಮಹಜರ್ ಮಾಡಿರುತ್ತಾರೆ. ಮಹಜರ್ ಕಾಲಕ್ಕೆ ನಾನು, ರಮೇಶ ಮತ್ತು ಸೋಮ ಹಾಜರು ಇದ್ದೆವು. ಮಹಜರ್ ನ್ನು ಬೆ. 10.30 ರಿಂದ 11.00 ಗಂಟೆಯವರೆಗೆ ಮಾಡಿರುತ್ತಾರೆ. ಮಹಜರ್ ಕಾಲಕ್ಕೆ ಪೊಲೀಸರು ಕಲ್ಲನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಸದರಿ ಕಲ್ಲನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಕಲ್ಲನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ಮು.ಮಾ–1 ಎಂದು ಗುರುತಿಸಲಾಯಿತು.

ಮಹಜರ್ ನ್ನು ನೋಡುತ್ತಿದ್ದು ಅದನ್ನು ನಿಪಿ–2 ಎಂದು ಮತ್ತು ಅದರಲ್ಲಿ ಇರುವ ಸಾಕ್ಷಿದಾರರ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು.

ಮಹಜರ್ ಕಾಲಕ್ಕೆ ಪೊಲೀಸರು ಪೋಟೋ ತೆಗೆದಿರುತ್ತಾರೆ. ಆ ಪೋಟೋಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಎರಡು ಪೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ–3 ಮತ್ತು 4 ಎಂದು ಮತ್ತು ಸಿ.ಡಿ.ಯನ್ನು ನಿಪಿ–5 ಎಂದು ಗುರುತಿಸಲಾಯಿತು.

(ಈಹಂತದಲ್ಲಿ ಮಾನ್ಯ ಎಪಿಪಿರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಅನುಮತಿ ಕೋರುತ್ತಾರೆ. ಅನುಮತಿ ನೀಡಲಾಯಿತು)

**ಪಾಟೀ ಸವಾಲು ಮಾನ್ಯ ಎಪಿಪಿರವರಿಂದಃ**

ದಿಃ 27.09.2023 ರಂದು ಗಲಾಟೆಯಾಗಿರುತ್ತದೆ ಎಂದರೆ ಸರಿ. ನಾನು ಚಾವಡಿಯಲ್ಲಿ ಮಲಗಿದ್ದಾಗ ಆರೋಪಿ ಅಲ್ಲಿಗೆ ಬಂದು ಅವಾಚ್ಯ ಶಬ್ದಗಳಿಂದ ಬೈದು ಇಲ್ಲಿ ಏಕೆ ಮಲಗಿದ್ದೀಯಾ ಎಂದು ನನ್ನ ಜೊತೆ ತೀಟೆ ಜಗಳ ತೆಗೆದಿರುತ್ತಾನೆ ಎಂದರೆ ಸರಿ. ನನ್ನ ತಾಯಿಗೂ ಸಹ ಕಲ್ಲಿನಿಂದ ಮೈಕೈಗೆ ಆರೋಪಿ ಹೊಡೆದಿರುತ್ತಾನೆ ಎಂದರೆ ಸರಿ. ನನ್ನ ತಮ್ಮ ನನ್ನನ್ನು ಮತ್ತು ನನ್ನ ತಾಯಿಯನ್ನು ಗುಂಡ್ಲುಪೇಟೆ ಆಸ್ಪತ್ರೆಗೆ ಕರೆದುಕೊಂಡು ಬಂದು ಹೆಚ್ಚಿನ ಚಿಕಿತ್ಸೆಗೆ ಚಾಮರಾಜನಗರ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾನೆ ಎಂದರೆ ಸಾಕ್ಷಿಯು ಕಗ್ಗಳ ಹುಂಡಿ ಆಸ್ಪತ್ರೆಯಿಂದ ಚಾಮರಾಜನಗರ ಆಸ್ಪತೆಗೆ ಹೋಗಿರುತ್ತೇವೆ ಎಂದು ನುಡಿಯುತ್ತಾರೆ.

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಎಸ್.ಎನ್.ಎನ್. ವಕೀಲರಿಂದಃ**

ನಾನು ಮತ್ತು ಆರೋಪಿ ಹಾಗೂ ಇತರರು ಕಾಡಿಗೆ ಪಾಚಿ ಕೀಳಲು ಹೋಗುತ್ತಿದ್ದೆವು ಎಂದರೆ ಸರಿ. ಸದರಿ ಪಾಚಿಯನ್ನು ಲ್ಯಾಂಪ್ ಸೊಸೈಟಿಗೆ ಮಾರಾಟ ಮಾಡಿ ಬಂದ ಹಣವನ್ನು ಎಲ್ಲರೂ ಹಂಚಿಕೊಳ್ಳುತ್ತಿದ್ದೆವು ಎಂದರೆ ಸರಿ. ಗಲಾಟೆಯಾಗುವ ಪೂರ್ವದಲ್ಲಿ ಪಾಚಿ ಕೀಳಲು ಹೋಗಿರುವುದಿಲ್ಲ. ಆರೋಪಿ ನನ್ನ ಸ್ವಂತ ಚಿಕ್ಕಪ್ಪನ ಮಗ ಆಗಬೇಕು. ನಮ್ಮ ಮತ್ತು ಆರೋಪಿಯ ಮನೆಗೆ 100 ಮೀಟರ್ ಅಂತರವಿರುತ್ತದೆ. ನಮ್ಮ ಮತ್ತು ಆರೋಪಿಯ ಜಮೀನುಗಳು ವಿಭಾಗ ಆಗಿರುತ್ತವೆ. ಜಮೀನಿನ ಬಗ್ಗೆ ಯಾವುದೇ ತಂಟೆ ತಕರಾರು ಇರುವುದಿಲ್ಲ. ಗಲಾಟೆಯಾದ ದಿನಾಂಕ, ತಿಂಗಳು ಮತ್ತು ಇಸವಿ ಹೇಳಲು ಬರುವುದಿಲ್ಲ. ಗಲಾಟೆಯಾದಾಗ ಮಧ್ಯಾಹ್ನ 3.45 ಗಂಟೆಯಾಗಿರುತ್ತದೆ. ನಾನು ಘಟನೆಯಾದಾಗ ಮನೆಯಲ್ಲಿ ಇದ್ದೆನು. ಆರೋಪಿ ನಮ್ಮ ಮನೆಯ ಹತ್ತಿರ ಬಂದಿರುತ್ತಾನೆ. ನಾನು ಕೂಗಿಕೊಂಡಾಗ ಜನರು ಬಂದಿರುತ್ತಾರೆ. ಸು. 15-20 ಜನರು ಇದ್ದರು. ನನ್ನ ತಮ್ಮ ಅಲ್ಲಿಗೆ ಬಂದಿರುತ್ತಾನೆ. ಅವನನ್ನು ಹೊರತುಪಡಿಸಿ ಬೇರೆ ಯಾರು ಬಂದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಬಟ್ಟೆ ರಕ್ತ ಕಲೆಯಾಗಿರುತ್ತದೆ. ಪೊಲೀಸರಿಗೆ ರಕ್ತ ಕಲೆಯಾದ ಬಟ್ಟೆಯನ್ನು ನೀಡಿರುವುದಿಲ್ಲ. ಆರೋಪಿ ಹೊಡೆಯುವ ಸಮಯದಲ್ಲಿ ಬಿಡಿಸಲು ನನ್ನ ತಾಯಿ ಬಂದಿರುತ್ತಾರೆ. ಆ ಸಮಯದಲ್ಲಿ ಮಧ್ಯಾಹ್ನ 3.15 ಗಂಟೆಯಾಗಿರುತ್ತದೆ. ಘಟನಾ ಸ್ಥಳದ ಚೆಕ್ ಬಂದಿ ಹೇಳಲು ಬರುವುದಿಲ್ಲ. ನನ್ನನ್ನು ಹೊಡೆಯುವ ಸಮಯದಲ್ಲಿ ನನ್ನ ತಮ್ಮ ಸಹ ಅಲ್ಲಿಗೆ ಬಂದಿರುತ್ತಾನೆ. ನಾನು ಕೂಗಿಕೊಂಡ ಸಮಯದಲ್ಲಿ ನನ್ನ ತಮ್ಮ ಬಂದಿರುತ್ತಾನೆ. ಆರೋಪಿ ನನ್ನ ತಾಯಿಗೆ ಕಲ್ಲಿನಿಂದ ಹೊಡೆದಿರುವುದಿಲ್ಲ, ಅವಳನ್ನು ಎತ್ತಿ ಎಸೆದಿರುತ್ತಾನೆ. ಇದೇ ಕಲ್ಲಿನಿಂದ ಹೊಡೆದಿರುತ್ತಾನೆ ಎಂಬ ಬಗ್ಗೆ ಗುರುತು ಇಟ್ಟುಕೊಂಡಿರುವುದಿಲ್ಲ. ಘಟನಾ ಸ್ಥಳದಲ್ಲಿ ಕಲ್ಲು ಇತ್ತು. ಪೊಲೀಸರು ಬರುವವರೆಗೂ ಆ ಕಲ್ಲು ಅಲ್ಲಿಯೆ ಬಿದ್ದಿತ್ತು.

ನಾವು ಗುಂಡ್ಲುಪೇಟೆ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುವುದಿಲ್ಲ. ನಾನಾಗಲಿ, ನನ್ನ ತಾಯಿ ಆಗಲಿ ಗುಂಡ್ಲುಪೇಟೆ ಸರ್ಕಾರಿ ಆಸ್ಪತ್ರೆಯಲ್ಲಿ ಎಂದೂ ಸಹ ಚಿಕಿತ್ಸೆಪಡೆದಿರುವುದಿಲ್ಲ. ಕಗ್ಗಳದ ಹುಂಡಿ ಆಸ್ಪತ್ರೆಯಲ್ಲಿ ಚಿಕಿತ್ಸೆ

ನೀಡಿರುತ್ತಾರೆ. ವೈದ್ಯರ ಎದುರಿಗೆ ಗಾಯದ ಬಗ್ಗೆ ಹೇಳಿರುತ್ತೇನೆ. ಆಸ್ಪತ್ರೆಗೆ ಹೋದಾಗ ಸಂಜೆ 4.00 ಗಂಟೆಯಾಗಿರುತ್ತದೆ.

ಗಲಾಟೆಯಾದ ಮಾರನೇ ದಿನ ಪೊಲೀಸರು ಬಂದಿರುತ್ತಾರೆ. ಕಗ್ಗಳದಹುಂಡಿ ಆಸ್ಪತ್ರೆಯಲ್ಲಾಗಲಿ, ಗುಂಡ್ಲುಪೇಟೆ ಸರ್ಕಾರಿ ಆಸ್ಪತ್ರೆಯಲ್ಲಾಗಲಿ ವೈದ್ಯರ ಎದುರಿಗೆ ಹಲ್ಲೆಯಾಗಿರುವ ಬಗ್ಗೆ ಪ್ರಕರಣ ದಾಖಲಿಸಬೇಕು ಎಂದು ಹೇಳಿರುವುದಿಲ್ಲ. ತಾಲ್ಲೂಕು ಕಛೇರಿಯಲ್ಲಿ ಪಿರ್ಯಾದನ್ನು ಬರೆಯಿಸಿರುತ್ತೇನೆ. ನನಗೆ ಓದಲು ಬರೆಯಲು ಬರುವುದಿಲ್ಲ, ಸಹಿ ಮಾತ್ರ ಮಾಡುತ್ತೇನೆ. ಪಿರ್ಯಾದಿಯಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. ಮಹಜರ್ ಗೆ ಬರುವ ಸಮಯದಲ್ಲಿ ಪೊಲೀಸರು ನೋಟೀಸ್ ನೀಡಿರುವುದಿಲ್ಲ. ಪೊಲೀಸರು ಮಹಜರ್ ಗೆ ಬಂದಾಗ ಸಾಕ್ಷಿದಾರರು ಅಲ್ಲಿಯೆ ಇದ್ದರು. ಮಹಜರ್ ನಲ್ಲಿ ಬರೆದಿರುವ ವಿಚಾರಗಳನ್ನು ಓದಿ ತಿಳಿದುಕೊಂಡಿರುವುದಿಲ್ಲ. ಪೊಲೀಸರು ಮಹಜರ್ ಗೆ ಒಂದು ಸಹಿ ಹಾಕುವಂತೆ ಹೇಳಿದ್ದರಿಂದ ಸಹಿ ಹಾಕಿರುತ್ತೇನೆ ಎಂದರೆ ಸರಿ. ಪೊಲೀಸರು ಅವರ ಮೊಬೈಲ್ ನಿಂದ ಪೋಟೋ ತೆಗೆದಿರುತ್ತಾರೆ.

ಪೊಲೀಸರು ಘಟನಾ ಸ್ಥಳಕ್ಕೆ ಬಂದಿರುವುದಿಲ್ಲ, ಘಟನಾ ಸ್ಥಳದಲ್ಲಿ ಮಹಜರ್ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮಹಜರ್ ಗೆ ಪೊ.ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ, ಕಲ್ಲಿನಿಂದ ಹೊಡೆದಿರುವುದಿಲ್ಲ ಎಂದರೆ ಸರಿಯಲ್ಲ. ಜಮೀನಿನಲ್ಲಿ ನಮಗೆ ಜಾಸ್ತಿ ಜಾಗ ಬರಬೇಕು ಎಂದು ನಾನೇ ಕುಡಿದು ಆರೋಪಿಯ ಜೊತೆ ಗಲಾಟೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನೇ ಮದ್ಯಪಾನ ಮಾಡಿ ಬಿದ್ದು ಗಾಯಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಅಪರಾಧ ಮಾಡದೇ ಇದ್ದರೂ ಸಹ ಆತನ ವಿರುದ್ಧ ಸುಳ್ಳು ದೂರನ್ನು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ
( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು. )

ಓ ಹೇ ಕೇಳಿ ಸರಿ ಇದೆ

ಹಿರಿಯ ಸಿವಿಲ್ ಜಡ್ಜ್ ಜೆಎಂಎಫ್ ಸಿ
ಗುಂಡ್ಲುಪೇಟೆ.